ದಿಃ 28.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

1. ನಾನು ಈ ದಾವೆಯನ್ನು ನನ್ನ ತಾಯಿಯ ಆಸ್ತಿಯಲ್ಲಿ ಪಾಲು ಬೇಕೆಂದು ಕೇಳಿರುತ್ತೇನೆ. ಈಗ ನನಗೆ 48 ವರ್ಷ ವಯಸ್ಸು. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಯಾವುದೇ ಆಸ್ತಿ ಬಂದಿರುವುದಿಲ್ಲ ನನ್ನ ತಂದೆಯೇ ಖರೀದಿ ಮಾಡಿರುತ್ತಾರೆ. ನನ್ನ ತಂದೆಯೇ ನಾಗರತ್ನರವರಿಗೆ ಮದುವೆ ಮಾಡಿ ಕಳುಹಿಸಿರುತ್ತಾರೆ ಎಂದರೆ ಸರಿ. ದಾವಸ್ವತ್ತಿಗಳಲಿ ನನ್ನ ತಾಯಿಗೂ ಹಿಸ್ಸೆ ಬರಬೇಕೆಂದು ಹೇಳಿ ಈ ದಾವೆಯನ್ನು ಮಾಡಿದ್ದೇನೆ ಎಂದರೆ ಸರಿ. ಈ ದಾವೆಯನ್ನು ನಾನೇ ಹೇಳಿ ಬರೆಸಿ ಹಾಕಿಸಿರುತೇನೆ ಕೃಷ್ಣೇಗೌಡರ ಹೆಂಡತಿ ರತ್ನರವರನ್ನು ಈ ಕೇಸಿನಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ಈ ದಾವೆ ಮಾಡುವ ಸಮಯದಲ್ಲಿ 05 ನೇ ಪ್ರತಿವಾದಿಯ ಹೆಸರಿನಲ್ಲಿ ಎಲ್ಲಾ ಆಸ್ತಿಗಳು ಇದ್ದವು. ನನ್ನ ತಾಯಿಯ ಹೆಸರಿನಲ್ಲಿರುವ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಾವಾಸ್ವತ್ತುಗಳಲ್ಲಿ ನನಗೆ ಎಷ್ಟು ಹಿಸ್ಸೆ ಬರಬೇಕೆಂದು ಈ ದಾವೆಯಲ್ಲಿ ಕೇಳಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿರುವ 01 ರಿಂದ 04 ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ನಾನು ಹೇಳಿದ ಹಾಗೆ ಈ ದಾವೆಯಲ್ಲಿರುವ 01 ರಿಂದ 04 ಆಸ್ತಿಗಳು ನನ್ನ ತಾಯಿಯ ಹೆಸರಿನಲ್ಲಿ ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ನೋಡಿ ಅದನ್ನು ಪರಿಶೀಲನೆ ಮಾಡಿ ಆ ನತಂರ ಈ ದಾವೆಯನ್ನು ಮಾಡಿರುತ್ತೇನೆ.

2. ನನ್ನ ಮದುವೆ 1993-94 ರಲ್ಲಿ ಆಗಿರುತ್ತದೆ. ನನ್ನ ಮದುವೆ ಮಾಡುವ ಸಮಯದಲ್ಲಿ ನನ್ನ ತಂದೆ ಜೀವಂತ ಇರಲಿಲ್ಲ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂತರ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆಯ ಮೂಖಾಂತರ ಬಂದಿರುತ್ತದೆ. ದಿಃ 03-08-1993 ರಲ್ಲಿ ನನ್ನ ಮದುವೆಗಾಗಿ ಸರ್ವೆ ನಂ. 11 ರಲ್ಲಿ 2 ಎಕರೆ 16 ಗುಂಟೆ ಜಮೀನಿನ ಪೈಕಿ 20 ಗುಂಟೆ ಜಮೀನನ್ನು ಪುಟ್ಟ

ಬೋರಮ್ಮರವರಿಗೆ ರೂ.26,500/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರವನ್ನು ನನ್ನ ತಾಯಿ ನನಗೆ ಹೇಳಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಈ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಮದುವೆಗಾಗಿ 20 ಗುಂಟೆ ಜಮೀನನ್ನು ನನ್ನ ತಾಯಿ ಮತ್ತು ಉಳಿದವರು ಮಾರಾಟ ಮಾಡಿದ್ದ ವಿಚಾರ ನನಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮದುವೆಗಾಗಿ ಈ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಮಾರು 10 ವರ್ಷಗಳ ಹಿಂದೆ ದಾವಸ್ವತ್ತುಗಳಲ್ಲಿ ಭಾಗಬೇಕೆಂದು ನನ್ನ ತಾಯಿಯ ಬಳಿ ಕೇಳಿರುತ್ತೇನೆ. ನಾನು ಭಾಗ ಬೇಕೆಂದು ಕೇಳಿದಾಗ ಆಸ್ತಿಗಳೇಲ್ಲವೂ ನನ್ನ ತಾಯಿಯ ಹೆಸರಿನಲಿತ್ತು.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 26.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

3. ಇಂದ್ರಮ್ಮನಿಗೆ ಯಾವಾಗ ಮದುವೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಇಂದ್ರಮ್ಮನಿಗೆ ಮದುವೆ ಮಾಡಬೇಕಾದರೆ 18 ಗುಂಟೆ ಜಮೀನನ್ನು ಮಾರಾಟ ಮಾಡಿ ಅದರಿಂದ ಬಂದ

ಹಣದಿಂದ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳೆಲ್ಲವೂ ಈಗ 05 ವಾದಿ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ. ಈ ದಾವೆಯಲ್ಲಿ ಹೇಳಿರುವ ವಿಚಾರಗಳ ಬಗ್ಗೆ ನನ್ನ ತಾಯಿಗೆ ಸಂಪೂರ್ಣ ಮಾಹಿತಿ ಇತ್ತು. ದಿಃ 15-04-1999 ರಲ್ಲಿ ನಮ್ಮ ಕುಟುಂಬದಲ್ಲಿ ಆದಂತಹ ವಿಭಾಗದ ಬಗ್ಗೆ ಮಾಹಿತಿ ಇತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ಹೇಳಿರುತ್ತಾರೆ. ನಮ್ಮ ಕಟುಂಬದಲ್ಲಿ ಆದಂತಹ ವಿಭಾಗದಲ್ಲಿ ನನ್ನ ತಾಯಿಯ ಪಾಲಿಗೆ 70 ತೆಂಗಿನ ಗಿಡಗಳ ಪೈಕಿ 40 ತೆಂಗಿನ ಗಿಡಗಳು ಬಂದಿರುತ್ತದೆ ಮತ್ತು ನಾನು ಈಗ 40 ತೆಂಗಿನ ಗಿಡಗಳನ್ನು ನೋಡಿಕೊಂಡು ಅದರಿಂದ ಬರುವ ಫಸಲನ್ನು ಪಡೆಯುತ್ತಿದ್ದೇನೆಂದರೆ ಸರಿ. 1993 ರಲ್ಲಿ ನನ್ನ ಮದುವೆಯಾಗಿರುತ್ತದೆ.

4. ನನ್ನ ಮದುವೆಗಾಗಿ ಸರ್ವೆ ನಂ. 11 ರಲ್ಲಿ 02 ಎಕರೆ 14 ಗುಂಟೆ ಪೈಕಿ 20 ಗುಂಟೆ ಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 11 ರಲ್ಲಿ 02 ಎಕರೆ 14 ಗುಂಟೆ ಜಮೀನು ಈಗ ನನ್ನ ತಾಯಿಯ ಹೆಸರಿನಲ್ಲಿ ಇರುತ್ತದೆ ಆ ಬಗ್ಗೆ ನಾನು ದಾಖಲೆ ನೋಡಿರುತ್ತೇನೆ. ನನ್ನ ತಾಯಿಯ ಹೆಸರಿನಲ್ಲಿರುವ ಯಾವುದೇ ದಾಖಲೆಯನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದ ಮೂಖಾಂತರ ನನ್ನ ತಾಯಿಗೆ ಕೇವಲ 40 ತೆಂಗಿನ ಗಿಡಗಳು ಮಾತ್ರ ಬಂದಿರುತ್ತದೆ ಅದನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ನನ್ನ ತಾಯಿಯ ಹೆಸರಿಗೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. 40 ತೆಂಗಿನ ಗಿಡಗಳಿರುವ 01 ಎಕರೆ ವಿಸ್ತೀರ್ಣ ಜಾಗದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ. 11 ರಲ್ಲಿ 1998-99 ನೇ ಸಾಲಿನಲ್ಲಿ ವಿಭಾಗ ಪತ್ರದ ಮೂಲಕ ರಾಮಲಿಂಗಯ್ಯ, ಶಿವರಾಮೇಗೌಡ ಮತ್ತು ಶಾರದಮ್ಮರವರಿಗೆ ತಲಾ 18 ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. 02 ಎಕರೆ 14 ಗುಂಟೆ ಜಮೀನು ಎಂದೂ ನನ್ನ ತಾಯಿಯ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಅಣ್ಣಂದಿರ ಪಾಲಿಗೆ ಕೊಟ್ಟಿರುವ ಜಮೀನಿಗಿಂತ ಹೆಚ್ಚಿನ ಜಮೀನಿನಲ್ಲಿ ಅಂದರೆ 22 ಗುಂಟೆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿಯಲ್ಲ. 05 ನೇ ಪ್ರತಿವಾದಿ ಮತ್ತು ನನ್ನ ಅಣ್ಣಂದಿರು ನಮ್ಮ ಮದುವೆಗಾಗಿ ಮಾರಾಟ ಮಾಡಿದಂತಹ ಜಮೀನುಗಳು 1993–94 ನೇ ಸಾಲಿನಲ್ಲಿ ಖರೀದಿದಾರರಾದ ಪುಟ್ಟಬೋರಮ್ಮ ಮತ್ತು ಗೌರಮ್ಮನವರ ಹೆಸರಿಗೆ ಆರ್.ಟಿ.ಸಿ ಇರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನನ್ನ ಅಣ್ಣಂದಿರಿಗೆ ತೊಂದರೆ ಕೊಡುವ ಉದ್ದೇಶದಿಂದ ಈಗ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಐಟಂ 02 ರಿಂದ 04 ಮುಂಚೆ ನನ್ನ ತಂದೆಯ ಹೆಸರಿಗಿತ್ತು ಈಗ ನನ್ನ ತಾಯಿಯ ಹೆಸರಿಗಿರುತ್ತದೆ ಎಂದರೆ ಸರಿ. ರಾಜಪ್ಪ ಅಲಿಯಾಸ್ ರಾಜೇಗೌಡ ಬಿನ್ ಸಿದ್ದೇಗೌಡರವರಿಗೆ 1983–84 ನೇ ಸಾಲಿನಲ್ಲಿ ದಾವಾ ಐಟಂ 03 ಅವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಶಿವರಾಮೇಗೌಡ ಬಿನ್ ಸಿದ್ದೇಗೌಡರವರಿಗೆ 1983–84 ನೇ ಸಾಲಿನಲ್ಲಿ 55x100 ವಿಸ್ತೀರ್ಣದ ಖಾಲಿ ಜಾಗ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಐಟಂ ನಂಬರ್ 02 ರಿಂದ 04 ಆಸ್ತಿಗಳು ನನ್ನ ಅಣ್ಣಂದಿರ ಸ್ವಯಾರ್ಜಿತ ಆಸ್ತಿಗಳಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–05 ವಿಲ್ ಅನ್ನು ನನ್ನ ತಾಯಿ ನನ್ನ ಸಹೋದರಿ ಶಶಿಕಲಾರವರಿಗೆ ಬರೆದಿರುತ್ತಾರೆ. ವಿಲ್ ನಲ್ಲಿ ಹೇಳಿರುವ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ. ವಿಲ್ ನಲ್ಲಿ ಹೇಳಿರುವ ಆಸ್ತಿಯಲ್ಲದೆ ಇನ್ನು ಸರ್ವೆ ನಂ. 11 ರಲ್ಲಿ 01 ಎಕರೆ ಜಮೀನು ಇರುತ್ತದೆ ಆ ಜಮೀನಿನಲ್ಲಿ ನಾನು ಸ್ವಾಧೀನದಲ್ಲಿರುತ್ತದೆ. ನಾನು ಈಗ ಸ್ವಾಧೀನದಲ್ಲಿರುವ 01 ಎಕರೆ ಜಮೀನನ್ನು ಸಹ ದಾವೆಯಲ್ಲಿ ಸೇರಿಸಿರುತ್ತೇನೆ. ನಾನು ಸ್ವಾಧೀನದಲ್ಲಿರುವ 01 ಎಕರೆ ಜಮೀನಿನ ಚಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ. ನಾನು ಸುಮಾರು 20 ರಿಂದ 30 ವರ್ಷದಿಂದ ಸ್ವಾಧೀನದಲ್ಲಿರುತ್ತೇನೆ. ಅದರಿಂದ ಬರುತ್ತಿದ್ದ ಆದಾಯವನ್ನು ನಾನು ಮತ್ತು ನನ್ನ ತಾಯಿ ಉಪಯೋಗಿಸಿಕೊಳ್ಳುತ್ತಿದ್ದೇವು.

6. ನಾನು ಅರಸೀಕೆರೆಯಲ್ಲಿ ವಾಸವಾಗಿರುತ್ತೇನೆ. ನನ್ನ ತಾಯಿ ಭದ್ರಾವತಿ ತಾಲ್ಲೂಕಿನಲ್ಲಿ ವಾಸವಾಗಿದ್ದರು. ನನ್ನ ತಾಯಿಯ ಯೋಗಕ್ಷೇಮವನ್ನು ಆಕೆಯ ಗಂಡು ಮಕ್ಕಳೇ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ವಿಲ್ ಅನ್ನು ನನ್ನ ತಾಯಿ ಬರೆದಂತಹ ವಿಚಾರ ನನಗೆ ಗೊತ್ತಿರಲಿಲ್ಲ, ನನ್ನ ತಾಯಿ ಮೃತ ಪಟ್ಟ ನಂತರ ನಮ್ಮ ಸಂಬಂಧಿಕರ್ಯಾರೋ ವಿಲ್ ಅನ್ನು ನನಗೆ ಕೊಟ್ಟಿರುತ್ತಾರೆ. ನಮಗೆ ವಿಲ್ ಕೊಟ್ಟಂತಹ ವ್ಯಕ್ತಿಯ ಹೆಸರು ಪಾಪಣ್ಣ ಅವರು ಹಳೆಯ ಸಂಬಂಧಿಕರು ಇರಬಹುದು ನನಗೆ ಅವರ ಪರಿಚಯವಿರುವುದಿಲ್ಲ. ವಿಲ್ ಮಾಡುವ ಸಮಯದಲ್ಲಿ ನನ್ನ ತಾಯಿಗೆ ಸುಮಾರು 75 ವರ್ಷ ವಯಸ್ಸಾಗಿರಬಹುದು. ಆ ಸಮಯದಲ್ಲಿ ನನ್ನ ತಾಯಿಗೆ ನಡೆದಾಡುವ ಶಕ್ತಿ ಇರಲಿಲ್ಲ, ಗಂಡು ಮಕ್ಕಳ ಮನೆಯಲ್ಲೆ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಗೆ ವಯಸ್ಸಾಗಿದ್ದ ಕಾರಣ ಅವರು ಏನು ಮಾಡುತ್ತಿದ್ದರು ಎನ್ನುವ ಬಗ್ಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಸಹೋದರಿಯರು ಇಲ್ಲದೆ ಇರುವ ಆಸ್ತಿಗಳ ಬಗ್ಗೆ ಒಂದು ವಿಲ್ ಅನ್ನು ನನ್ನ ತಾಯಿ ಬರೆದುಕೊಟ್ಟ ಹಾಗೆ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಈಗಾಗಲೇ ಅತಿ ಹೆಚ್ಚು ಭಾಗ ಬಂದಿದ್ದರು ಸಹ ನನ್ನ ಅಣ್ಣಂದಿರ ಪಾಲಿಗೆ ಬಂದಿರುವ 18 ಗುಂಟೆ ಜಮೀನಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕೃಷ್ಣೇಗೌಡ ನನ್ನ ಅಣ್ಣ ಎಂದರೆ ಸರಿ. ಕೃಷ್ಣೇಗೌಡರಿಗೆ ಹೆಂಡತಿ ಇರುತ್ತಾರೆ. ಕೃಷ್ಣೇಗೌಡರಿಗೆ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಏಕೆಂದರೆ ಅವರೆಲ್ಲಿದ್ದಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಕೃಷ್ಣೇಗೌಡರಿಗೆ ಹೆಂಡತಿಯನ್ನು ಈ ದಾವೆಯಲ್ಲಿ ಪಕ್ಷಗಾರನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನದಲಿ ಇದ್ದೇನೆ ಎಂದು ಹೇಳುವ 01 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರಿಸದೆ ಇರುವ ಕಾರಣ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳನ್ನು ಸೇರಿಸಿರುತ್ತೇನೆಂದು ಹೇಳುತ್ತಾರೆ. 01 ಎಕರೆ ಜಮೀನನ್ನು ಮರೆಮಾಚಿ ಈ ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 24.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

**7.** ನಾನು ಮತ್ತು ನನ್ನ ತಾಯಿ ಸೇರಿ ಈ ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿ. ದಾವಾಸ್ವತ್ತುಗಳೆಲ್ಲವೂ ನನ್ನ ತಾಯಿಯ ಹೆಸರಿಗೆ ಇರುತ್ತದೆ. ದಾವಾ ಷೆಡ್ಯೂಲ್-01ರ 02 ಎಕರೆ 14 ಗುಂಟೆ ಜಮೀನು ನನ್ನ ತಾಯಿಯ ಹೆಸರಿನಲ್ಲಿದೆ ಇದೆ ಎಂದು ತೋರೀಸಲು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ದಾವಾ ಐಟಂ.ನಂಬರ್ -02 ರಿಂದ 04 ಸಹ ನನ್ನ ತಾಯಿಯ ಹೆಸರಿನಲ್ಲಿರುತ್ತದೆ. ದಾವಾಸ್ವತ್ತುಗಳು ನನ್ನ ತಂದೆಯಿಂದ ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ದಾವಾಸ್ತಿಗಳು ಯಾವುದು ನನ್ನ ತಾಯಿಯ ಹೆಸರಿನಲ್ಲಿರುವುದಿಲ್ಲ ಎಂದರೆ ಸರಿಯಲ್ಲ.

**8.** ದಿಃ 15-04-1999 ರಲ್ಲಿ ನಮ್ಮ ಕುಟುಂಬದಲ್ಲಿ ಜುಬಾನಿ ಹಿಸ್ಸೆಯ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನ್ಯಾಯಾಲಯಕ್ಕೆ ಯಾವೇಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ನನಗೆ ಗೊತ್ತಿರುತ್ತದೆ. ನನ್ನ ತಾಯಿ ನಿಪಿ-5 ರಂತೆ ವಿಲ್ ಬರೆಯಬೇಕಾದರೆ ದಾವಾಸ್ವತ್ತುಗಳೆಲ್ಲವೂ ನನ್ನ ತಾಯಿಯ ಹೆಸರಿನಲ್ಲಿ ಇದ್ದವು. ನನ್ನ ತಾಯಿಯ ಹೆಸರಿನಲ್ಲಿ ಇಲ್ಲದೆ ಇರುವ ಆಸ್ತಿಗಳನ್ನು ಸಹ ನಿಪಿ-05 ವಿಲ್ ನಲ್ಲಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಹಾಗೂ ಇತರರು ನನ್ನ ಅಣ್ಣಂದಿರ ಮೇಲೆ ಆಸ್ತಿಯಲ್ಲಿ ಪಾಲುಬೇಕೆಂದು ಈ ದಾವೆ ಮಾಡಿರುತ್ತೇವೆ. ನನ್ನ ತಾಯಿ ಈಗ ಮೃತಪಟ್ಟಿರುತ್ತಾರೆ. ನನ್ನ ತಾಯಿ ನಮ್ಮ ಮದುವೆಗಾಗಿ ದಾವಾ ಐಟಂ.ನಂಬರ್ -01 ರಲ್ಲಿ ತಲಾ 20 ಗುಂಟೆ ಜಮೀನನ್ನು 05 ಮತ್ತು 7 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿ ಎಂದೂ ನನಗೆ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆಂದು ಹೇಳಿರುವುದಿಲ್ಲ ಮತ್ತು ನಾನು ಈ ದಾವೆಯಲ್ಲಿ ಮಾರಾಟ ಮಾಡಿದ ವಿಚಾರದ ಬಗ್ಗೆ ಹೇಳಿರುವುದಿಲ್ಲ ಮತ್ತು ಪರಿಹಾರ ಕೇಳಿರುವುದಿಲ್ಲ.

**9.** ಸರ್ವೆ ನಂ. 11ರಲ್ಲಿ 70 ತೆಂಗಿನ ಮರಗಳನ್ನು ವಾದಿಗಳೆಲ್ಲರೂ ನೋಡಿಕೊಂಡು ಅದರ ಆದಾಯವನ್ನು ಪಡೆಯುತ್ತಿದ್ದೇವೆ ಎಂದರೆ ಸಾಕ್ಷಿಯು 40 ತೆಂಗಿನ ಮರಗಳನ್ನು ನನ್ನ ತಾಯಿಗೆ ಬಿಟ್ಟಿದ್ದರು, ಆ ನಂತರ ನಾವು ನೋಡಿಕೊಳ್ಳುತ್ತಿರುತ್ತೇವೆ ಎಂದು ನುಡಿಯುತ್ತಾರೆ. ತಲಾ 10 ತೆಂಗಿನ ಮರಗಳನ್ನು ಗಂಡು ಮಕ್ಕಳಿಗೆ ಕೊಟ್ಟಿರುತ್ತಾರೆ. ಈಗ ಹೆಣ್ಣು ಮಕ್ಕಳ ಬಳಿ 40 ತೆಂಗಿನ ಮರಗಳು ಇರುತ್ತವೆ. 70 ತೆಂಗಿನ ಮರಗಳು ಒಂದೂವರೆ ಎಕರೆಯಲ್ಲಿರುತ್ತದೆ. 70 ತೆಂಗಿನ ಮರಗಳು ನನ್ನ ತಂಗಿ ಶಶಿಕಲಾಗೆ ವಿಲ್ ಆಗಿರುವ ಕಾರಣ ನಾನು ಪಾಲು ಕೇಳುವುದಿಲ್ಲ. ನನ್ನ ತಾಯಿಗೆ ನನ್ನ ತಂದೆಯಿಂದ ಆಸ್ತಿಗಳು ಬಂದಿರುವ ಕಾರಣ ನನ್ನ ತಾಯಿಗೆ ವಿಲ್ ಮಾಡಲು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಆಸ್ತಿಗಳನ್ನು ನನ್ನ ತಾಯಿಯ ಹೆಸರಿಗೆ 1966 ನೇ ಇಸವಿಯಲ್ಲಿ ವರ್ಗಾವಣೆ ಮಾಡಿರುತ್ತಾರೆ. ದಿಃ 05-09-1984ರಲ್ಲಿ ದಾವಾ ಐಟಂ.ನಂಬರ್-02ರ ನಿವೇಶನ ನನ್ನ ತಂದೆ ಸಿದ್ದೇಗೌಡರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ. ದಾವಾ ಐಟಂ.ನಂಬರ್ -03 ಅನ್ನು 02 ನೇ ಪ್ರತಿವಾದಿಯ ಹೆಸರಿಗೆ ಮಂಜೂರಾಗಿರುತ್ತದೆ ಆಗಾಗಿ ಅದು ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. ದಾವಾ ಐಟಂ.ನಂಬರ್-04 ಅನ್ನು 03 ನೇ ಪ್ರತಿವಾದಿಯ ಗಂಡ ರಾಜೇಗೌಡರಿಗೆ ಮಂಜೂರಾಗಿರುತ್ತದೆ ಆಗಾಗಿ ಅದು ಅವರ ಸ್ವಂತ ಆಸ್ತಿ ಎಂದರೆ ಸರಿಯಲ್ಲ. 1984 ನೇ ಇಸವಿಯಿಂದ 02 ಮತ್ತು 03 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ದಾವಾ ಐಟಂ.ನಂಬರ್ -03 ಮತ್ತು 04 ಪಿತ್ರಾರ್ಜಿತ ಆಸ್ತಿ ಗಳಾಗಿರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆಗೆ ಮಂಜೂರಾಗಿದ್ದು, ನಂತರ ನನ್ನ ತಂದೆಯೇ ಇಬ್ಬರು ಗಂಡು ಮಕ್ಕಳಿಗೂ ಬಿಟ್ಟುಕೊಟ್ಟಿರುತ್ತಾರೆಂದು ಹೇಳುತ್ತಾರೆ. ನನ್ನ ತಂದೆಯ ಹೆಸರಿಗೆ ದಾವಾ ಐಟಂ.ನಂಬರ್-2 ಮಾತ್ರ ಮಂಜೂರಾಗಿರುತ್ತದೆ ದಾವಾ ಐಟಂ.ನಂಬರ್-03 ಮತ್ತು 04 ನನ್ನ ತಂದೆಯ ಹೆಸರಿಗೆ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ದಾವಾ ಐಟಂ.ನಂಬರ್ -3 ಮತ್ತು 4 ರಲ್ಲಿ ಅವರು ಸ್ವಾಧೀನಾನುಭವ ಹೊಂದಿರುತ್ತಾರೆ ಮತ್ತು ಅವರ ಹೆಸರಿಗೆ ಖಾತೆ ಇರುತ್ತದೆ ಎಂದರೆ ಸರಿ.

10. ದಾವಾ ಐಟಂ.ನಂಬರ್ -01 ರಲ್ಲಿ ಒಂದು ಎಕರೆ ಜಮೀನು ಮಾರಾಟ ಮಾಡಿ ಉಳಿದ ಜಮೀನನ್ನು ಮಾಯಮ್ಮ, ರಾಮಲಿಂಗಯ್ಯ , ಶಿವರಾಮೇಗೌಡ ಮತ್ತು ಶಾರದಮ್ಮರವರು ದಿಃ 15-04-1999ರ ವಿಭಾಗಪತ್ರದ ಮೂಖಾಂತರ ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. ಸದರಿ ವಿಭಾಗ ಪತ್ರವನು ಎಲ್ಲೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಆಸ್ತಿಗಳು ನನ್ನ ತಾಯಿಯ ಹೆಸರಿಗೆ ಇರುತ್ತದೆ ಎಂದು ಹೇಳಿರುತ್ತಾರೆ. ನನನ ತಾಯಿಯ ಪಾಲಿಗೆ ಬಂದಂತಹ 18 ಗುಂಟೆ ಜಮೀನನ್ನು ಮದುವೆಯ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ನಾನು ನನ್ನ ತಾಯಿಯನ್ನು ಸೇರಿಕೊಂಡು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ

ಕೇಳಿರುವ ಪಾಲಿಗಿಂತ ಹೆಚ್ಚಿನ ಪಾಲನ್ನು ಈಗಾಗಲೇ ಪಡೆದಿರುವ ಕಾರಣ ನಾನು ಕೇಳಿರುವ ಪರಿಹಾರವನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ.ನಂಬರ್–02 ರಿಂದ 04 ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಇದ್ದಾಗಲೇ ದಾವಾ ಐಟಂ.ನಂಬರ್–01 ರಲ್ಲಿನ ಆಸ್ತಿಯನ್ನು ಮಾರಾಟ ಮಾಡಿದ್ದು ಮತ್ತು ಉಳಿದ ಆಸ್ತಿಯಲ್ಲಿ ತಲಾ 18 ಗುಂಟೆಯಂತೆ ಗಂಡು ಮಕ್ಕಳ ಪಾಲಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿಗಳು ಗೊತ್ತಿದ್ದರೂ ಸಹ ಸತ್ಯಾಂಶವನ್ನು ಮರೆಮಾಚಿ ಈ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ 15–04–1999 ರಲ್ಲಿ ಸುಧಾರವರ ಮದುವೆಗಾಗಿ ರೂ.4,80,000/– ಕ್ಕೆ 20 ಗುಂಟೆ ಜಮೀನನ್ನು ದಾವಾ ಐಟಂ.ನಂಬರ್–1 ರಲ್ಲಿ 7 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. 1993–94 ನೇ ಸಾಲಿನಲ್ಲಿ 05 ನೇ ಪ್ರತಿವಾದಿಗೆ 20 ಗುಂಟೆ ಜಮೀನನ್ನು ದಾವಾ ಐಟಂ.ನಂಬರ್–1 ರಲ್ಲಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಉಳಿದ 01 ಎಕರೆ 16 ಗುಂಟೆ ಜಮೀನನ್ನು ನನ್ನ ತಾಯಿ ಮತ್ತು ನನ್ನ ಮೂರು ಜನ ಅಣ್ಣಂದಿರು ತಲಾ 18 ಗುಂಟೆಯಂತೆ ಹಂಚಿಕೊಂಡಿರುತ್ತಾರೆಂದರೆ ಸರಿಯಲ್ಲ. ದಾವಾ ಐಟಂ.ನಂಬರ್–01 ರ ಸರ್ವೆ ನಂ.11 ರಲ್ಲಿ ಹೇಳಿರುವ 02 ಎಕರೆ 14 ಗುಂಟೆ ಜಮೀನಿನ ಜೊತೆಗೆ ಇನ್ನೂ 01 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಈ 01 ಎಕರೆ 20 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಏಕೆಂದರೆ ನನ್ನ ತಾಯಿ ವಿಲ್ ಬರೆದಿರುತ್ತಾರೆ. ನನ್ನ ತಾಯಿಗೆ ವಿಲ್ ಮಾಡಲು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. 01 ಎಕರೆ 20 ಗುಂಟೆ ಜಮೀನಿನಲ್ಲಿ 01 ಎಕರೆಯಲ್ಲಿರುವ ತೆಂಗಿನ ತೋಟವನ್ನು 04 ನೇ ವಾದಿ ನೋಡಿಕೊಳ್ಳುತ್ತಿರುತ್ತಾರೆ, ಆದರೆ ಜಮೀನುಗಳು ಇನ್ನು ನಮ್ಮ ಹಸೆರಿಗೆ ಬಂದಿರುವುದಿಲ್ಲ. ನಾವು 04 ಜನ ಹೆಣ್ಣು ಮಕ್ಕಳು 1 ಎಕರೆ ತೆಂಗಿನ ತೋಟವನ್ನು ಅನುಭವಿಸುತ್ತಿರುತ್ತೇವೆ ಎಂದರೆ ಸರಿಯಲ್ಲ. ನಾನು ಸತ್ಯಾಂಶವನ್ನು ಮರೆಮಾಚಿ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮುಂದುವರಿಂದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿಃ 23.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ವಿ ವಕೀಲರಿಂದ ,**

**11.** 5 ನೇ ವಾದಿಯ ಹೆಸರಿನಲ್ಲಿ ದಾವಾ ಸ್ವತ್ತುಗಳು ಇದ್ದವು, ನಾವು ನಮ್ಮ ಅಣ್ಣಂದಿರಿಂದ ಭಾಗ ಬರಬೇಕು ಎಂದು ಈ ದಾವೆ ಹೂಡಿರುತ್ತೇವೆ. ಪ್ರತಿವಾದಿ 5 ಮತ್ತು 7 ರವರಿಗೆ ಸ.ನಂ. 11 ರಲ್ಲಿ ತಲಾ 20 ಗುಂಟೆ ಜಮೀನು ನನ್ನ ತಾಯಿ ಮತ್ತು ಅಣ್ಣ-ತಮ್ಮಂದಿರು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ತಾಯಿ ನನಗೆ ಆಸ್ತಿ ಮಾರಾಟ ಮಾಡಿರುವ ವಿಚಾರ ಹೇಳಿದರು ಸಹ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಸಹಕಾರ ಸಂಘದಲ್ಲಿ ಮಾಡಿರುವ ಸಾಲದ ತಿರುವಳಿಗಾಗಿ ಮತ್ತು 3 ನೇ ವಾದಿಯ ಮದುವೆಯ ಖರ್ಚಿಗಾಗಿ 5 ಮತ್ತು 7 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುವುದು ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ 1 ಮತ್ತು 2 ನನ್ನ ತಾಯಿಯವರ ಹೆಸರಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರಿನಲ್ಲಿ ಈ ಆಸ್ತಿಗಳು ಇಲ್ಲದಿದ್ದರು ಸಹ ಕಾನೂನು ಬಾಹಿರವಾಗಿ ನಾವು ನಮ್ಮ ತಾಯಿಯಿಂದ ವಿಲ್ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ಮತ್ತು 2 ಯಾರ ಹೆಸರಿಗೆ ದಾಖಲೆ ಇದೆ ಎಂದು ಗೊತ್ತಿಲ್ಲದಿದ್ದರು ಸಹ ಕಾನೂನು ಬಾಹಿರವಾಗಿ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಹಿಂದೆ ಕುಟುಂಬದಲ್ಲಾದಂತಹ ಹಿಸ್ಸೆಯಲ್ಲಿ ವಾದಿಗಳಿಗೆ ಹೆಚ್ಚಿನ ಪಾಲನ್ನು ಕೊಟ್ಟಿರುತ್ತಾರೆ, ಆ ಆಸ್ತಿಯನ್ನು ಇದರಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸ್ವಾಧೀನದಲ್ಲಿರುವ 70 ತೆಂಗಿನ ಮರಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿ ಆ ಜಮೀನು ಯಾರ ಹೆಸರಿನಲ್ಲಿರುವುದಿಲ್ಲ ಎಂದು ಹೇಳಿರುತ್ತಾರೆ. ನಾನು 70 ತೆಂಗಿನ ಮರಗಳು ನನ್ನ ಸ್ವಾಧೀನದಲ್ಲಿರುತ್ತಾವೆ ಎಂದು ಈ ದಾವೆಯಲ್ಲಿ ಬರದಿರುವುದಿಲ್ಲ. ನಾನು ಸತ್ಯಾಂಶವನ್ನು ಮರೆಮಾಚಿ ಈ ದಾವೆ ಮಾಡಿರುವ ಕಾರಣ ನಾವು ಕೇಳಿರುವ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ